(90) 2

Regd No B G 155 Sri 14-5-1965

ಸತ್ಯವಾದಿ

48th Year
Satyavadi
DAILY
MYSORE 4

ಸಂಸ್ಥಾಪಕರು — ಅರಮನೆಸಿಂಸ್ಕೇದಾರ್ ಎಂ ವಿ ಸುಬ್ಬರಾಯುರು ಸಂಪಾದಕರು — ಧರ್ಮಪ್ರಚಾರಿಂಸ ಎಂ ಎಸ್ ಕೃಷ್ಣಂರವ್

ಅಕ್ಕರ ಸರಬರಾಜು ಬಗ್ಗೆ ಪಾಕ್ ಮಾತಿಗೆ ತಪ್ಪಿತು

ಕಲ್ಕತ್ತಾ— ಈಗಿರುವ ಒಪ್ಪಂದದಂ ಸಂಬರಾಜು ಮಾಡಬೇಕಾದ 30 ಸಾವಿರ ಟನ್ ಅಕ್ಕಿ ರಂಬರಾಜು ಮಾಡಿದೆ ; ಎಂ ಕ್ಕಿದ್ದನ್ನು ಸಂಬರಾಜು ಮಾಡಲು ನಿರಾ ಕರಿಸಿದೆ.

★

1 ಪೌಂಡಿನ ಡರ್ಟಿ ಟಿಕೀಟ್ಗು

ಜೊಂಬಾಯಿ — ಪ್ರತಿಬಂಧಿಸಿರುವ ಡರ್ಟಿ ಟಿಕೀಟ್ಗುಗಳನ್ನು ಗಟ್ಟಾಗಿ ತರಿಸಿ 20 ರೂಗಳ ಹೆಚ್ಚಿಗೆಗೆ ಮಾರುತ್ತಿರುವವ ರನ್ನು ಗುಜರಾತಿನಲ್ಲಿ ಪೋಲೀಸರು ಪತ್ತೆ ಹಚ್ಚಿರುವರು.

ಹುಡುಗಿಯರನ್ನು ಪೀಡಿಸುವವರು

ಭವನೇಶ್ವರ— ಯುವತಿಯರನ್ನು ಪೀ ಡಿಸುವವರು ಈಗ ಅವರನ್ನು ಕೊಲ್ಲಲುಪ ಕ್ರಮಿಸಿರುವರು — 10 ದಿನಗಳಲ್ಲಿ ಮೂರು ಮಂದಿ ಚಿಕ್ಕವಯಸ್ಸಿನ ಮುಹಳಿ ಯರು ಪುರಿ ಇರಿತಕ್ಕೆ ತುತ್ತಾಗಿರುವರ್ ತಕ್ಷೀಂದಾರರು ಸಿಕ್ಕಿಬಿದ್ದಿಲ್ಲ.

ರಾಷ್ಟ್ರ ಪ್ರಧಾನಿ

ಭಾರತಕ್ಕೆ ಭೇಟಿ ಕೊಡುವಂತೆ ರಷಿ ಯಾ ಪ್ರಧಾನಿಯವರಿಗೆ ಭಾರತ ಪ್ರಧಾ ನಿಯವರಿಕ್ತ ಆಹ್ವಾನವನ್ನು ಅವರು ಅಂ ಗೀಕರಿಸಿರುವರು

ಒಪ್ಪಂದಕ್ಕೆ ಪ್ರಯತ್ನ

ಲಂಡನ್— ಕಚ್ಚಿನ ರಾಣ್ ವಿಷಯ ದಲ್ಲಿ ಭಾರತ-ಪಾಕಿಸ್ತಾನಗಳ ನಡುವೆ ಒಪ್ಪ ಏರ್ಪಡಲು ಪ್ರಯತ್ನ ನಡೆಯುತ್ತಿದ್ದರೆ ಫಲಿಸುವ ನಿರೀಕ್ಷೆ ಇದೆಯೆಂದು ಪ್ರ ಧಾನಿ ಹೆರಾಲ್ಡ್ ವಿಲ್ಸನ್ರು ಹೇಳಿದರು

ಭಾರತದ ನೀತಿ

ಮಾಸ್ಕೊ— ನಮ್ಮ ಸ್ವಾತಂತ್ರ್ಯ ಮತ್ತು ಸಾರ್ವಭೌತ್ವ ರಕ್ಷಣೆಗೆ ತಕ್ಕಷ್ಟು ಮತ್ತು ಶಾಂತಿಯುತ ಸಹಬಾಳ್ವೆ ನೀತಿ ಯನ್ನೇ ಅನುಸರಿಸಿಕೊಂಡು ಹೋಗಲಾ ಗುವುದು ಎಂದು ಭಾರತ ಪ್ರಧಾನಿ ಶಾ ಸ್ತ್ರಿಗಳು, ರಷ್ಯಾ ಸರಕಾರ ಮಂಗಳ ವಾರ ಮಂಗಳವಾರ ಅವರಿಗಿತ್ತ ಔತಣ ದಲ್ಲಿ ಹೇಳಿದರು — ಭಾರತದ ತಟಸ್ಥ ನೀತಿಗೆ ಬೆಂಬಲಿಸುವ ರಷ್ಯಾ ಸರಕಾರ ವನ್ನು ಮೆಚ್ಚಿಸಿದರು.

★

ಸಂಸ್ಕೃತ ಪ್ರಶಾಲೆ

ನವದೆಹಲಿ— 65-66 ರಲ್ಲಿ ಸಂಸ್ಕೃತ ಶಿಕ್ಷಣವನ್ನು ಹೆಚ್ಚು ಪ್ರಸಾರ ಮಾಡಲು ಭಾರತ ಸರ್ಕಾರ ನಿರ್ಧರಿಸಿರುವುದಾಗಿ ಪ್ರಕಟವಾಗಿದೆ.

★

ಶೇಖಖಣೆಯಲ್ಲಿ ಬೋಡಪೋಷ

ವಾಷಿಂಗ್ಟನ್— ಸೆರೆಯಲ್ಲಿದ್ದ ಭಾರತ ಸಾತನು ಮಿತ್ರರ ಶಾಂತಿಯಿಂದ ಭಾರತದಲ್ಲಿನ ಬೆಳೆಯು ಶೇಖಖಣೆಯಲ್ಲಿ ಶೇಕಡ 25 ರಷ್ಟು ಸತ್ವವಾಗುತ್ತಿರುವುದೆಂದು ಅಮೇರಿಕಾ ನಿಪುಣರು ಅಭಿಪ್ರಾಯ ವ್ಯಕ್ತಪಡಿಸಿರುವರು.

★

ಹಣ ಹಾಗೇ ಇದೆ

ನವದೆಹಲಿ — ಸಾಲವಾಗಿ ನೀಡಲಾಗಿರುವ ಅಮೇರಿಕಾ ನೆರವಿನ ಹೆಚ್ಚು ಹಣವು ಉಪಯೋಗಿಸಿಕೊಳ್ಳಲ್ಪಡದೆ ಹಾಗೆ ಳಿದಿದೆ ಎಂದು ಪ್ರಕಟವಾಗಿದೆ

★

ಸಾಳೆಯ ಹಂಚಾಂಗ

ದೈವಜ್ಞ ಶಿಖಾಮಣಿ
ಅಷ್ಟಾವಧಾನಮಹಾವಿದ್ವಾನ್ ಧರ್ಮಾಧಿಕಾರಿ
ರಾಜಕಾರ್ಯಾಸಕ್ತ, ಜ್ಯೋತಿರ್ವಿದ್ಯಾಸ್ನಾತ
ಸಂಪತ್ಕೃಷ್ಣಜೋಯಿಸರಿಂದ

15 ಶನಿವಾರ ಪೂರ್ಣಿಮ ವಿಶಾಖಾ
ವಾಸ — ಬುದ್ಧ ಪೂರ್ಣಿಮ

ಬದ್ರಿನಾಥ್

ಡೇರಾಡೂನ್— ಬದ್ರಿನಾಥ ದೇವಾ ಲಯವು ಮೊನ್ನೆ ತೆರೆಯಲಾಯಿತು ; ಬಹುಮಂದಿ ಭಕ್ತರು ಹಾಜರಿದ್ದರು.

★

ಒಂದು ಲಕ್ಷ ಮಂದಿ

ಹೈದರಾಬಾದಿನಲ್ಲಿ 1ಲಕ್ಷ ಕ್ಕೂ ಹೆಚ್ಚು ಜನ ಮೊಹರಂನಲ್ಲಿ ಭಾಗಹಿಸಿದ್ದರು.

ಏಕ್ಯವಾಗಲಿ

ಲಂಡನ್— ಐಕ್ಯ ಜರ್ಮನಿ ಬಗ್ಗೆ ಪಾಶ್ಚಾತ್ಯ ಮೂರು ಶಕ್ತಿಗಳೂ ಸಮ್ಮತ ನೀಡಿವೆ

★

ಒಪ್ಪಿಗೆ ಇಲ್ಲವಂತೆ

ಕಂಚಿ— ಜನವರಿ 1 ರಲ್ಲಿದ್ದಂತೆ ಭಾರ-ಪಾಕಿಸ್ತಾನಗಳು ಆಯಾ ಸ್ಥಳಗ ಳಿಗೆ ವಾಪಸಾಗಬೇಕೆಂಬ ಬ್ರಿಟನ್ನಿನ ಪ ಂತ್ರಿಗೆ ಶಾಸ್ತ್ರಿ ಒಪ್ಪುವುದಿಲ್ಲವೆಂದು ಪತಿ ಕಿತ್ಯಾಸ ತಿಳಿಸಿರುವಷಾಗಿ ವಾದಿಯಾಗಿದೆ

★

ಷೇಕ್ ಅಬ್ದುಲ್ಲಕುಸ್ತಿ

ಉದಕಮಂಡಲ— ಷೇಕ್ ಅಬ್ದುಲ್ಲ ಯ ವಂಗಳವಾರ ಸಂಜೆ ಅಂಗಡಿಗಳಿಗೆ ವ್ಯಾಪಾರಕ್ಕೆ ಹೋಗಿದ್ದರು ; ಜೊತೆಯ ಅಸಾಧ ಪೋಲೀಸು ಇದ್ದರು : ಉಸ್ತ ಪೋಲೀಸು ಅಧಿಕಾರಿಯೊಬ್ಬರೂ, ಕಲೆ ಕ್ಟರ್ ಪರ್ಸನಲ್ ಅಸಿಸ್ಟೆಂಟರೂ ಇದ್ದರು — ಸಂಕರ ಸಿನಿಮಾಕ್ಕೆ ಹೆಕೀಗಿದ್ದರು

★

ಪೋಲೀಸರಿಗೆ ಗಾಯ

ದಕ್ಷಿಣ ಜೊಂಬಾಯಿ ಡೊಂಗರೀ ಭಾಗದಲ್ಲಿ ಕಾಪಿತ ಪಿಯಾ ಮುಸ್ಲಿಂ ಗುಂಪು ಪೋಲೀಸ್ ಸ್ಟೇಷನ್ನಿನ ಮೇಲೆ ನಡೆಸಿದ ಧಾಳಿಯಲ್ಲಿ ಜೊತ್ತೆ 7 ಪೋ ಲೀಸರು ಅಧಿಕಾರಿಗಳು ಮತ್ತು 13 ಕಾ ನಸ್ಟೇಬಲರು ಗಾಯಗೊಂಡರು — ಅ ಲಹಾಬಾದಿನಲ್ಲಿ ವಿಶ್ವಹಿಂ ಪೆಂವೆಣಿಗೆ ಯವರಿಗೂ ಪೋಲೀಸರಿಗೂ ಘರ್ಷಣೆ ಯಾಗಿ 6 ಮಂದಿ ಪೋಲೀಸರು ಗಾಯ ಗೊಂಡರು

ನಾಗರೀಕ ಪಲಹೆ

— ಎರ್ನಾಕುಲಂ— ದೇಶದಲ್ಲಿರುವ ವಿ ದೇಶೀ ವಿದ್ಯಾರ್ಥಿಗಳನ್ನು ಭಾರತೀಯರ ವಿವಾಹ, ಸಂಸ್ಕೃತಿ ಕಾರ್ಯಕ್ರಮ, ಸ ಮಾರಂಭಗಳಿಗೆ ಆಹ್ವಾನಿಸಿ ಅವರ ಜೀ ವಿತ ಸುಖವಯವಾಗುವಂತೆ ಮಾಡಬೇ ಕೆಂದು ಇಲ್ಲಿ ನಡೆದ ವಿದ್ಯಾರ್ಥಿ ಸಮಾವೇಶದಲ್ಲಿ ನಿರ್ಧರಿಸಲಾಯಿತು — ಭಾರತದಲ್ಲಿ ೨೦೦೦ ವಿದೇಶೀ ವಿದ್ಯಾರ್ಥಿಗಳಿದ್ದಾರೆ.

ಪರಿಸ್ಥಿತಿ ಹಾಗೇ ಇದೆ.

ನವದೆಹಲಿ— ಕಚ್ಚಿನ ರಾಣ್ ವಿಚಾರ ದಲ್ಲಿ ಇನ್ನೂ ರಾಜಕೀಯ ವಿಚಾರ ವಿ ನಿಮಯಗಳು ನಡೆಯುತ್ತಿದ್ದರೂ ಪರಿಸ್ಥಿತಿ ಬದಲಾವಣೆ ಆಗಿರೆಯೆಂದು ಹೇಳುವಂತಿ ಲ್ಲವೆಂದು ವಾದಿಯಾಗಿದೆ

★

ಚರ್ಚೆ

ಮಾಸ್ಕೊ— ಭಾರತ ಪ್ರಧಾನಿಗಳು ಬಲವಾರ್ ನಾಟಕರಂಗಕ್ಕೆ ಸೌಹಾರ್ದನೋ ಡಲು ಹೋದಾಗ ಅಲ್ಲಿದ್ದವರೆಲ್ಲಾ ಇ ವನ್ನು ಕಂಡ ಸಂತೋಷಾರ್ಥವಾಗಿ ಹರ್ಷೋದ್ಗಾರದೊಡನೆ ಚಪ್ಪಾಳೆ ಹೊಡೆ ದರು.

★

ಪ್ರಧಾನಿಗಳ ವಿಶ್ರಾಂತಿ

ಮಾಸ್ಕೊ— ಭಾರತ ಮತ್ತು ರಷ್ಯ ಪ್ರಧಾನಿಗಳು ತಮಗೆ ಸಂಬಂಧಿಸಿದ ಅಂ ತರಾಷ್ಟ್ರೀಯ ವಿಚಾರ ಮತ್ತು ಭಾರ ತಕ್ಕೆ ಆರ್ಥಿಕ ನೆರವು ಕುರಿತು ವಿಶ್ರಾಂತ ಕತೆ ನಡೆಸಿದರು.

ಮುಂಬಯಿಯ 'ಸಾಧು ಬೇಲಾ'

★

ಭಾರತದ ಪ್ರಾಂತಗಳಲ್ಲಿ ಪಂಜಾಬು ಪ್ರಸ್ತ ಸಿಂಧ್ ಪ್ರದೇಶಗಳು ಜಗತ್ತಿಗೆ ಉಚ್ಚಮಟ್ಟದ ಸಂಸ್ಕೃತಿಯನ್ನು ತೋರಿಸಿಕೊಟ್ಟಿವೆ : ಸಮೃದ್ಧ ಪವಿತ್ರ ನದಿಗಳಲ್ಲಿ ಒಂದಾಗಿರುವ ಸಿಂಧೂ ನದಿಯು ಹರಿಯುವ ಈ ಪ್ರದೇಶವು ವ್ಯಾಪಾರದ ದೊಡ್ಡ ಪ್ರದೇಶವಾಗಿತ್ತು ; ಮತ್ತು ಸಂಸ್ಕೃತಿ, ವಿಜ್ಞಾನಶಿಕ್ಷಣ, ತತ್ವಜ್ಞಾನಗಳ ಬೀಡೂ ಆಗಿತ್ತು ; ಮಹಂಜೋದಾರೋ ಅವಶೇಷಗಳು ಸಾವಿರಾರು ವರ್ಷಗಳ ಹಿಂದಿನ ಉಚ್ಚ ಸಂಸ್ಕೃತಿ, ನಾಗರೀಕತೆಗಳನ್ನು ತಿಳಿಸುತ್ತಿದೆ.

ಅಂಥ ಪವಿತ್ರ ಸಿಂಧೂದೇಶದಲ್ಲಿ, 1342 ರಲ್ಲಿ, ವ್ಯಕಂಡಿ ಮಹಾರಾಜರ ಜನನವಾಯಿತು : ಸಿಂಧ್‌ನಿಂದ ಮೂವತ್ತು ಮೈಲಿ ದೂರವಿರುವ ಪವಾಡಿ ಎಂಬ ಸ್ಥಳದಲ್ಲಿ ಅವರು ತಮ್ಮ ಹದಿನೂರನೇ ವಯಸ್ಸಿನಲ್ಲಿ ಒಂದು ಚಿಕ್ಕ ಆಶ್ರಮವನ್ನು ಕಟ್ಟಿಸಿ, ನಗ್ನಪಂಥದ ರಾಜಾ ಸಾಬಾಪುರಿಯವರಿಂದ ಸನ್ಯಾಸದೀಕ್ಷೆ ಹೊಂದಿದರು : ಸಾಧುಗಳಿಗೆ ಆಶ್ರಯವಿತ್ತು ಅವರ ಒಂದು ಮಂಡಲಿ (ಸಂಘ) ರಚಿಸಿ, ಆ ಮೂಲಕ ಅವರಿಗೆ ಜ್ಞಾನೋಪದೇಶ ಮಾಡಬೇಕೆಂದು ಆ ಆಶ್ರಮದ ಉದ್ದೇಶವಾಗಿತ್ತು : ಅದುಂತಲೇ ಅವರ ಸ್ಥಳವು ಈ ಅರ್ಥಬರುವಂತೆ ' ಸಾಧು ಬೇಲಾ ' ಎಂಬ ಹೆಸರಿನಿಂದ ಪ್ರಸಿದ್ಧವಾಯಿತು.

ಸ್ವಾಮೀಜಿಯವರ ಅಪ್ರತಿಮ ಪ್ರತಿಭೆ, ಪರಿಶುದ್ಧ ಜೀವನ, ಜ್ಞಾನಪ್ರದಾನದ ದೀಕ್ಷೆ, ಇದು ಕೀರ್ತಿಯು ಸುತ್ತಮುತ್ತಲ ಪ್ರದೇಶಗಳಿಗೆ ಹಾಯಿತು : ಅವರ ದರ್ಶನ ಪಡೆದವರು ಮಾನಸಿಕ ಶಾಂತಿ ಹೊಂದಿ, ಈ ಆಶ್ರಮವು ವೃದ್ಧಿಹೊಂದಿ ಅಧಿಕಾಧಿಕ ಜನರಿಗೆ ಬೆಳಕನ್ನು ನೀಡುವುದಕ್ಕೆ, ಜನರು ಉದಾರ ಹಸ್ತದಿಂದ ಧನ ಸಹಾಯವನ್ನಿತ್ತರು ; 1832 ರೊಳಗಾಗಿ ಆ ಆಶ್ರಮವು ಮೂರು ಸಾವಿರ ಜನರಿಗೆ ನಿತ್ಯವೂ ಅನ್ನದಾನ ಮಾಡುವ ಪ್ರಸಿದ್ಧ ಕೇಂದ್ರವಾಗಿ ಬೆಳೆಯಿತು.

ಈ ಪುಣ್ಯಕ್ಷೇತ್ರವನ್ನು ಕಂಡು ಅಲ್ಲಿಯ ಆ ಕಾಲದ ಗವರ್ನರಾಗಿದ್ದ ಮೌಂಟೊ ಮಾರ್ಟಿಂಡಲ್ ಅವರು ಸರಕಾರಕ್ಕೆ ಬರೆದು ಸಂಸ್ಥಾನದಿಂದಲೂ ಅವರಿಗೆ ಸಹಾಯ ಆಗುವಂತೆ ಪ್ರಯತ್ನಿಸಿದರು : ಆದರೆ ಬ್ರಿಟಿಷ್ ಸರ್ಕಾರದ ವಿಷಯದಲ್ಲಿ ಅಪಾರ ಭಕ್ತಿ ವಿಶ್ವಾಸ ಇಟ್ಟುಕೊಂಡಿದ್ದ ಮಹಾರಾಜರು ಅವರ ಸಹಾಯ ಸ್ವೀಕರಿಸಲು ಒಪ್ಪಲಿಲ್ಲ ಮುಸಲ್ಮಾನರು ಹೆಚ್ಚಾಗಿರುವ ಆ ಸಿಂಧಿಕರಲ್ಲಿ ಈ ಪುಣ್ಯಾತ್ಮರು ಮುಸ್ಲಿಂರಿಂದಲೂ ಸಹಾಯ ಪಡೆದರು.

ಚಕ್ರವರ್ತಿಗಳಿಂದಲೂ ಜನರು ಬಂದು, ಸ್ವಾಮೀಜಿಯವರ ದರ್ಶನ ಪಡೆದು, ಅವರಿಂದ ಮಂತ್ರೋಪದೇಶ ದೀಕ್ಷೆಗಳನ್ನು ಹೊಂದಿದರು ; ಸಾಧು ಬೇಲಾವರ ಈ ಗುರುಕುಲವು ವೃದ್ಧಿಗೊಂಡಿತು,

ಮಧ್ಯಾಹ್ನ ಒಂದು ಗಂಟೆಗೆ ಸರಿಯಾಗಿ ಸಾವಿರ ಜನರು ' ಪಂಗತ್ ' (ಸಹಸ್ರ ಭೋಜನ) ಗೆ ಕುಳಿತುಕೊಳ್ಳುತ್ತಿದ್ದರು. [ಸಶೇಷ]

ನಾಳೆ ಬುದ್ಧ ಪೂರ್ಣಿಮೆ ಪ್ರಯುಕ್ತ ಸತ್ಯವಾದಿ ಕಾರ್ಯಾಲಯದಲ್ಲಿ ರಜೆಯಿದೆ



ಗೋರಕ್ಷಣ ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

ವುಡ್‌ಲಾಂಡ್ ಶಿ ನಿ ಅಮೋಘ 2 ನೇ ವಾರ

ಶರಾಬಿ (ಹಿಂದಿ) Sharabi

ಪಾತ್ರ— ದೇವಾನಂದ್, ಮಧುಬಾಲ, ಲಲಿತ ಪವಾರ್, ಮುಂತಾದವರು

ಸಂಗೀತ : ಮದನಮೋಹನ — ಡೈರೆಕ್ಷನ್ ; ರಾಜ್ ಖೋಸ್ಲ

ಪ್ರತಿದಿನ 3 ಪ್ರದರ್ಶನಗಳು

ಆಪೆರಾ— ಜನಪ್ರಿಯ 3 ನೇ ವಾರ

ಅಮೋಘ ಕನ್ನಡ ಚಿತ್ರ — ದಿನ 3 ಆಟಗಳು

ಸರ್ವಜ್ಞಮೂರ್ತಿ [ಕನ್ನಡ]

ಪಾತ್ರ— ರಾಜಕುಮಾರ್, ಉದಯಕುಮಾರ್, ಹರಣಿ, ಮೈಸೂರವಿ, ಬಾಲಕೃಷ್ಣ

SHAKTI

SUDHA

A Superb Tonic

Help The Gorakshana

★

" ಗೋರಕ್ಷಣಾ " ಕ್ಕೆ ಜೆಂಬಲಿಗರಾಗಿರಿ

ಶ್ರೀ ಪ್ರಾಜ್ಞಾರಣ್ಯ ಜಗದ್ಗುರು ಪುಷ್ಪಗಿರಿ ಸ್ವಾಮಿಗಳವರು, ಶ್ರೀ ಶೃಂಗೇರಿ ಜಗದ್ಗುರು ಪರಮಪೂಜ್ಯ ಸ್ವಾಮಿಗಳವರ ಆಶೀರ್ವಾದ ಅನುಗ್ರಹ ಪೂರ್ವಕವಾಗಿದೆ

ಕರ್ನಾಟಕದಲ್ಲಿ ಗೋಹತ್ಯೆ, ಪ್ರಾಣಿದಯೆ, ಶಾಲೀವಾಹನ ಶಕವರ್ಷ

ವಿಚಾರಗಳಿಂದ ಕೂಡಿದ ಏಕೈಕ ಸ್ವತಂತ್ರ ಪತ್ರಿಕೆ.

ವಾರ್ಷಿಕ ಚಂದಾ 30 ರೂಪಾಯಿ ' ಗೋರಕ್ಷಣ ' ಕ್ಕೆ ಚೀಲುಗಳನ್ನೂ ಪ್ರೋತ್ಸಾಹಧನವನ್ನೂ ಮುಂಚಿತವಾಗಿ ಸ್ವೀಕರಿಸಲಾಗುವುದು

ವಿಳಾಸ— ಗೋರಕ್ಷಣ ಆಫೀಸು ಚಾಮರಾಜಪುರಂ, ಮೈಸೂರು 4

Edited, Printed & Published by the Proprietor
Dharma Prachara Nidhi M S Krishna Rao
at the Satyavadi Press, Chamarajapuram, Mysore 4